ನಮ್ಮ ತೆಳು ರೊಟ್ಟಿಯಿಂದ ಅವರ ಹೊಟ್ಟೆ ತುಂಬಲ್ಲ. ಇವರಿಗೆ ಜೋಳದ ಮುದ್ದೆನೇ ಆಗ್ಬೇಕು...'' ಎಂದು ಪಂಡಿತರು ಪ್ರತಿಷ್ಠೆಯಲ್ಲಿ ಬೀಗಿ ಮಾತಾಡಿದರು.

''ಈಗ ಹೋಗ್ಲಿ ಬಿಡಿ, ಈ ಸೆಕೆಯಲ್ಲಿ ಒಲೆ ಮುಂದೆ ಯಾರು ಸಾಯ್ತಾರೆ...'' ಎಂದಳು ಮಡದಿ.

ದುಖಿ ಚಿಲುಮೆ ಧಮ್ ಎಳೆದು ಮತ್ತೆ ಕೊಡಲಿ ಹಿಡಿದ. ತಂಬಾಕಿನಿಂದ ಒಂಚೂರು ಅವನ ಕೈಯಲ್ಲಿ ಶಕ್ತಿ ಬಂದಂತಾಯಿತು. ಅರ್ಧಗಂಟೆವರೆಗೆ ಒಂದೇ ಸಮನೆ ಕೊಡಲಿ ಏಟು ಹಾಕಿದ. ನಿಶ್ಶಕ್ತಿ ಎನಿಸಿದಂತೆ ಮತ್ತೆ ತಲೆ ಹಿಡಿದುಕೊಂಡು ಕುಳಿತ. ಅಷ್ಟರಲ್ಲಿ ಗೊಂಡ ಬಂದ.

''ಅದು ಯಾಕೆ ಅಷ್ಟೊಂದು ಗಂಟು ಬಿಡಿಸಲು ಒದ್ದಾಡುತ್ತಿದ್ದಿಯಣ್ಣಾ?... ಪ್ರಾಣ ಕಳ್ಕೊತಿಯಾ ಅಷ್ಟೇ... ಸುಮ್ಮನೆ ಹೈರಾಣಾಗುತ್ತಿದ್ದಿಯಲ್ಲಾ?...'' ಎಂದ. ದುಖಿ ಹಣೆಯ ಬೆವರನ್ನು ಒರೆಸಿಕೊಂಡು,

''ಇನ್ನು ಗಾಡಿಯಷ್ಟು ಹೊಟ್ಟು ತುಂಬುವುದಿದೆಯಣ್ಣಾ!...'' ಎಂದ.

''ಹೊಟ್ಟೆಗೇನಾದರೂ ಸಿಕ್ತಾ?... ಬರೀ ಕೆಲ್ಸಾನೇ ಮಾಡ್ತಾ ಇದ್ದೀಯಾ!?... ಹೋಗಿ ಕೇಳೊದಲ್ವಾ?''

''ಎಂಥ ಮಾತಾಡ್ತಿ ಚಿಖುರಿ, ಬ್ರಾಹ್ಮಣರ ರೊಟ್ಟಿ ಜೀರ್ಣಿಸಿಕೊಳ್ಳಕ್ಕಾಗುತ್ತಾ?...'' ಎಂದ ದುಖಿ.

''ಅದರಲ್ಲೇನು!... ಮೊದಲು ಸಿಗಬೇಕಲ್ಲಾ?... ನಿನಗೆ ಕೆಲಸ ಹೇಳಿ ತಾವು ಮಾತ್ರ ಭರ್ಜರಿ ಊಟ ಮಾಡಿ ನಿದ್ರೆ ಮಾಡಬಹುದಾ?... ಏನಾದರೂ ಸಹಾಯ ಮಾಡಿದರೆ ಒಕ್ಕಲಿಗರು ಕೂಡಾ ಕೂಲಿ ಕೊಡ್ತಾರೆ... ಇವರು ಅಷ್ಟಕ್ಕೂ ಲಾಯಕ್ಕಿಲ್ಲ ಎಂದಂತಾಯಿಯಲ್ಲಾ... ಧರ್ಮಾತ್ಮರು ಎಂದು ಬೇರೆ ಕರೆಸಿಕೊಳ್ಳುತ್ತಾರೆ!...'' ಎಂದು ಗೊಂಡ ದಯ ತೋರಿ ವಾಸ್ತವ ಸಂಗತಿಗೆ ಸಿಡಿಮಿಡಿಗೊಂಡ.

''ಮೆತ್ತಗೆ ಹೇಳಣ್ಣ... ಕೇಳಿಸಿಕೊಂಡರೆ ಇಲ್ಲದ ಉಸಾಬರಿ!... ಸುಮ್ಮನೆ ಯಾಕೆ ತೊಂದರೆ!?...'' ಎಂದು ದುಖಿ ಚೇತರಿಸಿಕೊಂಡು ಮೇಲೆದ್ದ. ಕೊಡಲಿಯ ಬಿರುಸಿನ ಹೊಡೆತದಲ್ಲಿ ದುಖಿ ನಿರತನಾದಂತೆ ಚಿಖುರಿಗೆ ದಯೆ ಬಂದು ಅವನ ಕೈಯಲ್ಲಿರುವ ಕೊಡಲಿಯನ್ನು ಕಸಿದುಕೊಂಡು ತಾನೂ ಕೊರಡಿನ ಗಂಟಿಗೆ ಜೋರಾಗಿ ಒಂದೆರಡು ಏಟು ನೀಡಿದ. ಅದರಲ್ಲಿ ಒಂದು ಚೂರೂ ಗಾಯವಾಗಲಿಲ್ಲ. ಕೊಡಲಿಯ ಹೊಡೆತಕ್ಕೆ ಗೆರೆಯೂ ಮೂಡದಿರುವಾಗ ಗೊಂಡ ರೋಸಿ ಕೊಡಲಿ ಎಸೆದು,

''ಇದು ಜೀವ ಹೋದರೂ ಒಡೆಯಲ್ಲ ಬಿಡು... ನಿನ್ನನ್ನೇ ಸೀಳಿ ಬಿಡುತ್ತೆ ಅಷ್ಟೇ...'' ಎಂದು ಜಾಗ ಖಾಲಿ ಮಾಡಿದ.

ಪಂಡಿತರು ಇದೆಂಥ ಸೀಳದ ಗಂಟಿನ ಕೊರಡು ತಂದಿದ್ದಾರಲ್ಲಾ!... ಒಂದು ಚೂರು ಹೊಡೆತದ ಗಾಯವು ಕಾಣುವುದಿಲ್ಲವಲ್ಲಾ!... ಇದೇ ತರಹ ಎಷ್ಟೊತ್ತು ಹೊಡೆಯುವುದು?... ಮನೆಯಲ್ಲಿ ಎಷ್ಟೊಂದು ಕೆಲಸ ಉಳಿದು ಬಿಟ್ಟಿದೆ... ಪೂಜೆಗೆ ಏನಾದರೂ ಕೊರತೆಯಾದರೇ!?... ಇವರಿಗೇನು ಚಿಂತೆ... ಎಂದು ದುಖಿ ಯೋಚಿಸಿದ.

'ಹೊಟ್ಟು ತುಂಬುವುದಾದರೂ ಮುಗಿಸಿ ಬಿಡೋಣ. ಇವತ್ತು ಕಟ್ಟಿಗೆ ಒಡೆಯುವುದು ಆಗಲ್ಲ, ನಾಳೆ ಮುಗಿಸಿ ಕೊಡ್ತೀನಿ ಎಂದು ಬುದ್ಧಿಗಳಿಗೆ ಹೇಳಿದರಾಯಿತು' ಎಂದು ದುಖಿ ಬುಟ್ಟಿ ಎತ್ತಿಕೊಂಡು ಹೊಟ್ಟು ತುಂಬಲು ನಡೆದ. ಚೀಲದಲ್ಲಿ ತುಂಬಿ ಸಾಗಿಸಲು ಭಾರವೆಂದು ದುಖಿ ಸ್ವಲ್ಪ ಸ್ವಲ್ಪವೇ ಬುಟ್ಟಿಯಲ್ಲಿ ಒಬ್ಬನೇ ಇಡೀ ಹೊಟ್ಟನ್ನು ಎರಡು ಫರ್ಲಾಂಗ್ ದೂರದ ದಾಸ್ತಾನು ಕೊಠಡಿಗೆ ಸಾಗಿಸಿದ. ಅಷ್ಟು ಹೊಟ್ಟು ಖಾಲಿಯಾಗಲು ನಾಲ್ಕು ಗಂಟೆಯೇ ಹಿಡಿಯಿತು.

ಪಂಡಿತರು ನಿದ್ರೆಯಿಂದ ಎಚ್ಚೆತ್ತರು. ಕೈ ಕಾಲು ಮುಖ ತೊಳೆದುಕೊಂಡು ಎಲೆ ಅಡಿಕೆ ಮೆಲ್ಲುತ್ತಾ ಹೊರಗೆ ಬಂದರು. ಬುಟ್ಟಿಗೆ ತಲೆ ಆನಿಸಿ ದುಖಿ ಮಲಗಿರುವುದನ್ನು ಕಂಡರು.

''ಲೋ ದುಖಿಯಾ... ನೀನೇನು ನಿದ್ರೆ ಮಾಡಲಿಕ್ಕೆ ಬಂದಿದ್ದಿಯೇನು?... ಕೊರಡು ಹಾಗೆಯೇ ಬಿದ್ದಿದೆಯಲ್ಲಾ... ಇಷ್ಟೊತ್ತು ಏನು ಮಾಡುತ್ತಿದ್ದೆ?...'' ಎಂದು ಜೋರಾಗಿ ಕೂಗಿ ಮಾತಾಡಿಸಿದರು.